

4ದಶಕಗಳ ಕಾಲ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಗೊಂಡ ಬಸವರಾಜ ಹೊರಟ್ಟಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ವಿಧಾನಪರಿಷತ್ ಸದಸ್ಯರಾದ ಕೆ.ಸಿ. ಕೊಂಡಯ್ಯ, ಯು.ಬಿ. ವೆಂಕಟೇಶ್, ಶ್ರೀಕಂಠಯ್ಯ, ಚೌಡರಡ್ಡಿ ತೂಪಲ್ಲಿ, ತೇಜಸ್ವಿನಿ ಗೌಡ ಮುಂತಾದವರು ಈ ಸಂದರ್ಭದಲ್ಲಿದ್ದರು. 2/7/20

# ನಾಲ್ಕು ದಶಕದ ಸದಸ್ಯತ್ವದ ಸರದಾರ ಭಾವುಕ ಹೊರಟ್ಟಿಗೆ ಸನ್ಮಾನ

ಸಂ.ಕ. ಸಮಾಚಾರ ಬೆಂಗಳೂರು

ವಿಧಾನಪರಿಷತ್‌ನಲ್ಲಿ ನಲವತ್ತು ವರ್ಷ ಪೂರೈಸಿದ ಜೆಡಿಎಸ್‌ನ ಹಿರಿಯ ಮುಖಂಡ, ಪರಿಷತ್ ಸದಸ್ಯ ಬಸವರಾಜ್ ಹೊರಟ್ಟಿ ಅವರಿಗೆ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ವಿಧಾನಪರಿಷತ್ ಮೊಗಸಾಲೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್, ಕೆ.ಸಿ. ಕೊಂಡಯ್ಯ, ಚೌಡರಡ್ಡಿ ತೂಪಲ್ಲಿ, ತೇಜಸ್ವಿಗೌಡ ಅವರು ಹೊರಟ್ಟಿ ಅವರಿಗೆ ಮೈಸೂರು ಪೇಟ ತೊಡಿಸಿ ಏಲಕ್ಕಿ ಹಾರ ಹಾಕಿ ಸಿಹಿತಿನ್ನಿಸಿ ಹಾರೈಸಿದರು.

ವಿಧಾನಪರಿಷತ್‌ಗೆ ಇಪ್ಪುವರ್ಷಗಳ ಕಾಲ ಆಯ್ಕೆಯಾಗಿರುವ ಬಸವರಾಜ್ ಹೊರಟ್ಟಿ ಅವರು ದೇಶದಲ್ಲಿಯೇ ಪ್ರಥಮರೆನಿಸಿಕೊಂಡಿದ್ದಾರೆ. ಅವರ ಅಪಾರ ಅನುಭವ, ವಾಕ್‌ಚಾತುರ್ಯ, ಶಾಸನ ಸಭೆಯ ನಡಾವಳಿಗಳು ಅವರ ಬಾಯಲ್ಲಿಯೇ ಇರುತ್ತವೆ. ಅಷ್ಟೊಂದು ಅನುಭವದ ರಾಜಕಾರಣಿ ನಮ್ಮ ಮಧ್ಯ ಇರುವುದು ನಮಗೆ ಹಾಗೂ ರಾಜ್ಯಕ್ಕೆ ಹೆಮ್ಮೆಯ ವಿಷಯ ಎಂದು ಸದಸ್ಯರು ಹೇಳಿದರು.

ಈ ಸಂದರ್ಭದಲ್ಲಿ ಭಾವುಕರಾದ ಬಸವರಾಜ ಹೊರಟ್ಟಿ ಅವರು, ನಾನು ಸಾಮಾನ್ಯ ಶಿಕ್ಷಕನಾಗಿದ್ದೆ. ನನ್ನ ಸಹೋದ್ಯೋಗಿ ಶಿಕ್ಷಕರೇ ನನ್ನನ್ನು ಪರಿಷತ್‌ಗೆ ಆಯ್ಕೆಯಾಗುವಂತೆ ಮಾಡಿದರು.

ಸುಮಾರು ನಲವತ್ತು ವರ್ಷಗಳ ಕಾಲ ಪರಿಷತ್ ಸದಸ್ಯನನ್ನಾಗಿ ಆಯ್ಕೆ ಮಾಡುತ್ತ ಬಂದಿದ್ದಾರೆ. ಏಳು ಬಾರಿ ಪರಿಷತ್‌ಗೆ ಆಯ್ಕೆಯಾಗಿರುವೆ. ನನ್ನ ರಾಜಕೀಯ ಬದುಕಿನಲ್ಲಿ ಯಾವತ್ತೂ ಜಾತಿ-ಧರ್ಮ, ಹಣಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ. ಹೀಗಾಗಿ ಎಲ್ಲರೂ ನನ್ನ ಮೇಲೆ ಪ್ರೀತಿ ವಿಶ್ವಾಸ ಇಟ್ಟುಕೊಂಡಿದ್ದಾರೆ. ನಾನು ಯಾವತ್ತೂ ನನ್ನ ಜನರಿಗೆ ಋಣಿ ಎಂದು ಹೇಳಿದರು. ಸಚಿವಾಲಯದ ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.